# ದ್ವಾದಶಾನುಪ್ರೇಕ್ಷೆ





ಪಂಡಿತರತ್ನ

**ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ**

ಜನ್ಮ ಶತಾಬ್ದ 1888-1988

## ಪಂಡಿತರತ್ನ ಎರ್ತೂರು ಶಾಂತಿರಾಜ ಶಾಸ್ತ್ರಿಗಳ ಕೃತಿಗಳು

| ಸಂಖ್ಯೆ | ಕೃತಿಯ ಹೆಸರು | ಪ್ರಕಟಿಸಿದ್ದು |
|---|---|---|
| 1. | ಪಂಚಸ್ತೋತ್ರ : ಭಾವ ಪ್ರಕಾಶಿಕಾ (154 ಪುಟಗಳು) | 1913 |
| 2. | ಜೈನ ಪದ ಸಮುಚ್ಚಯ (36) | 1911 |
| 3. | ಜಿನಭಜನಸಾರ (152) | 1911, 1919, 1926, 1947 |
| 4. | ಪೂಜಾಸಾರಸಮುಚ್ಚಯಃ (308) | 1919, 1923, 1936 |
| 5. | ರತ್ನಾಕರಸಪಾದಶತಕಮ್ (132) | 1922 |
| 6. | ಶತಕತ್ರಯೀ (124) | 1922 |
| 7. | ಶತಕತ್ರಯ (ರತ್ನಾಕರ ವಿರಚಿತ) (150) | 1922, 1941 |
| 8. | ಅನ್ಯಯೋಗವ್ಯವಚ್ಛೇದಿಕಾ (102) | 1923 |
| 9. | ಮಹಾಪುರಾಣ (ಪೂರ್ವಪುರಾಣಂ ಮತ್ತು ಉತ್ತರಪುರಾಣಂ) (3242) | 1925, 1933, 1940, 1981 |
| 10. | ಜಿನಭಕ್ತಿ ಸಾರವು (ಪರಿಶೋಧಿಸಲ್ಪಟ್ಟ ಗ್ರಂಥ) (32) | 1925 |
| 11. | ಮೂರು ನೋಂಪಿಗಳ ಕಥೆಗಳು (32) | 1926, 1927 |
| 12. | ದ್ರವ್ಯ ಸಂಗ್ರಹಃ—(ಜೈನ ಸಿದ್ಧಾಂತ ಸಂಗ್ರಹ) (118) | 1928, 1951, 1974 |
| 13. | ನೇಮಿಜಿನೇಶಸಂಗತಿ (ಹರಿವಂಶ ಪುರಾಣ) (630) | 1931 |
| 14. | ಶಾಸ್ತ್ರೀಯ ಯಜ್ಞ—ಪುಸ್ತಕ ವಿಮರ್ಶೆ (38) | 1931 |
| 15. | ಶ್ರವಣಬೆಳ್ಗೊಳ ಶ್ರೀಗಳವರ ಭಾಷಣ ಸಂಗ್ರಹ (344) | 1932 |
| 16. | ನಂದೀಶ್ವರಾಷ್ಟಾಹ್ನಿಕಪೂಜಾದಿಸಂಗ್ರಹಃ (230) | 1932, 1934, 1938 |
| 17. | ನಾಗಕುಮಾರಚರಿತಂ (384) | 1933 |
| 18. | ಶತಕದ್ವಯ (ರತ್ನಾಕರ ವಿರಚಿತ) (48) | 1933 |
| 19. | ದಶಭಕ್ತಿಃ (276) | 1934, 1953 |
| 20. | ಶ್ರೀ ಪಾರ್ಶ್ವತೀರ್ಥಕರಚರಿತ (36) | 1934 |
| 21. | ಚತುರ್ವಿಂಶತಿತೀರ್ಥಕರಾರಾಧನ (278) | 1935 |
| 22. | ಶ್ರೀ ಜಂಬೂಸ್ವಾಮಿಚರಿತ (66) | 1935, 1951 |
| 23. | ದ್ವಾದಶಾನುಪ್ರೇಕ್ಷೆ (48) | 1936, 1950 |
| 24. | ಪರಮಾತ್ಮಬೋಧ (24) | 1937 |
| 25. | ನೃತ್ಯಮಹೋತ್ಸವ (30) | 1938 |

(3ನೆ ರಕ್ಷಾಪುಟವನ್ನು ನೋಡಿ)

ಜನ್ಮ ಶತಾಬ್ದಿ ಪ್ರಕಟಣೆ–5

# ದ್ವಾದಶಾನುಪ್ರೇಕ್ಷೆ

ಲೇಖಕರು :

ಎರ್ತೂರು ಶಾಂತಿರಾಜ ಶಾಸ್ತ್ರಿ

ಪ್ರಕಾಶನ :

**ಪಂಡಿತರತ್ನ ಎರ್ತೂರು ಶಾಂತಿರಾಜ ಶಾಸ್ತ್ರಿ ಟ್ರಸ್ಟ್**

**ಜನ್ಮ ಶತಾಬ್ದಿ 1888—1988**

ಮೊಮ್ಮಕ್ಕಳು ಅಜ್ಜಿಯವರಾದ ಶ್ರೀಮತಿ ಎಸ್. ಸುಭದ್ರಾದೇವಿಯವರ ಸಂಸ್ಮರಣೆಗಾಗಿ ಪುನರ್ ಮುದ್ರಣ ಮಾಡಿಸುತ್ತಿರುವುದು ಶ್ಲಾಘನೀಯವಾಗಿದೆ. ಧರ್ಮಪ್ರಭಾವನೆಯ ಕಾರ್ಯದಲ್ಲಿ ಶ್ರಮಿಸುತ್ತಿರುವ ಎಲ್ಲರಿಗೂ ಸನ್ಮಂಗಲವಾಗಲಿ.

ಶ್ರವಣಬೆಳಗೊಳ. ಕರ್ಮಯೋಗಿ
19–6–88. ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ.
ಶ್ರುತಪಂಚಮಿ.





ಎ. ಶಾಂತಿರಾಜಶಾಸ್ತ್ರಿಗಳ ಧರ್ಮಪತ್ನಿ ಸ್ವರ್ಗೀಯ
ಎಸ್. ಸುಭದ್ರಾದೇವಿಯವರು

ಕಿರುಪರಿಚಯ : ಸುಭದ್ರಾದೇವಿಯವರು ದಿನಾಂಕ **21-12-1906** ರಲ್ಲಿ ಮಂಡಿವರ್ತಕರಾಗಿದ್ದ ನಾಗಪ್ಪ–ಧರಣಮ್ಮರವರಿಗೆ ಜನಿಸಿದ ದ್ವಿತೀಯ ಪುತ್ರಿ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು ತಾಯಿಯ ಆಶ್ರಯದಲ್ಲಿ ಬೆಳೆದರು. ತಮ್ಮ ಹತ್ತೊಂಬತ್ತನೇ ವಯಸ್ಸಿನಲ್ಲಿ ಮೈಸೂರಿನ ಎಂ. ಎಲ್. ವರ್ಧಮಾನಯ್ಯನವರು ಇವರ ವಿವಾಹವನ್ನು ಶಾಂತಿರಾಜ ಶಾಸ್ತ್ರಿಗಳವರೊಡನೆ 1925ರಲ್ಲಿ ಮಾಡಿಸಿದರು. ಇವರು ವಿದ್ಯಾವಿನಯ ಸಂಪನ್ನೆಯೂ, ಗುಣವತಿ, ಸುಶೀಲೆಯೂ ಆಗಿದ್ದು ಅತಿಥಿ–ಅಭ್ಯಾಗತರನ್ನು ವೇಳೆಯ ಪರಿವೆ ಇಲ್ಲದೆ ವಿನಯಾದರದಿಂದ ಸತ್ಕರಿಸುವ ಸದ್ಗೃಹಿಣಿಯಾಗಿ

ದ್ದರು. ಅಲ್ಲದೆ ಶಾಸ್ತ್ರಿಗಳ ಎಲ್ಲಾ ಕೆಲಸ ಕಾರ್ಯಗಳಿಗೂ ಗ್ರಂಥರಚನೆ ಮತ್ತು ಮುದ್ರಣಕ್ಕೆ ಪ್ರೇರಕರೂ, ಸಹಾಯಕರೂ ಆಗಿದ್ದರು. "ವಿವೇಕಾಭ್ಯುದಯ" ಪತ್ರಿಕೆಯಲ್ಲಿ ಕೆಲವು ಲೇಖನಗಳನ್ನು ಸ್ತ್ರೀ ವಿಭಾಗದಲ್ಲಿ ಬರೆಯುತ್ತಿದ್ದರು. ಇವರಿಗೆ ನಾಲ್ವರು ಪುತ್ರರು ಮತ್ತು ನಾಲ್ವರು ಪುತ್ರಿಯರು ಇದ್ದು ಸಮಾಜದ ಗೌರವಾದರಗಳಿಗೆ ಪಾತ್ರರಾಗಿದ್ದರು ಇವರಿಗೆ ಧಾರ್ಮಿಕ ವಿಚಾರ, ಪೂಜೆ ಪುನಸ್ಕಾರದಲ್ಲಿ ಅತ್ಯಂತ ಗೌರವಾದರಗಳಿದ್ದವು. ದಿನಾಂಕ 31–5–1952ರಲ್ಲಿ ತಮ್ಮ ಪೂಜ್ಯ ಪತಿದೇವರ ವಿಯೋಗ ಹೊಂದಿ ಚಿಕ್ಕ ವಯಸ್ಸಿನ ಮಕ್ಕಳುಗಳ ಪಾಲನೆ–ಪೋಷಣೆ ಮತ್ತು ವಿದ್ಯಾಭ್ಯಾಸವನ್ನು ಬಹು ಕಷ್ಟದಿಂದ ಮಾಡಿಸಿ ಅವರುಗಳ ವಿವಾಹಾದಿ ಮಂಗಳ ಕಾರ್ಯಗಳನ್ನು ನೆರವೇರಿಸಿ ತಮ್ಮ ಸಂಪೂರ್ಣ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಅವರು ತಮ್ಮ 66ನೇ ವಯಸ್ಸಿನಲ್ಲಿ ದಿನಾಂಕ 20–12–1972 ರಂದು ಚಿರ ಶಾಂತಿ ಪಡೆದರು.

ಧರ್ಮ ಬಂಧುಗಳಾದ ಮೈಸೂರಿನ ಶ್ರೀ ಎಸ್. ನಾಗಕುಮಾರ್‌ರವರ ಸುಪುತ್ರರುಗಳೂ, ದಿ॥ ಎ. ಶಾಂತಿರಾಜಶಾಸ್ತ್ರಿ-ಸುಭದ್ರಮ್ಮನವರ ಮೊಮ್ಮಕ್ಕಳೂ ಆದ ಶ್ರೀ ಎನ್. ಶಾಂತೀಶ್, ಎನ್. ಜಿನೇಶ್ ಮತ್ತು ಎನ್. ಕಿಶೋರ್‌ರವರು ತಮ್ಮ ಪೂಜ್ಯ ಅಜ್ಜಿಯವರಾದ ಸ್ವರ್ಗೀಯ ಶ್ರೀಮತಿ ಎಸ್. ಸುಭದ್ರಾದೇವಿಯವರ ಸಂಸ್ಮರಣೆಗಾಗಿ ಈ

**" ದ್ವಾದಶಾನುಪ್ರೇಕ್ಷೆ "**

ಗ್ರಂಥದ ಚತುರ್ಥ ಮುದ್ರಣವನ್ನು ಮಾಡಿಸಲು ಧನ ಸಹಾಯ ಮಾಡಿರುತ್ತಾರೆ.

ಇವರಿಗೆ ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ಆಭಾರಿಯಾಗಿದೆ.

# ಪ್ರಕಾಶಕರ ವಿಜ್ಞಾಪನೆ

ಈ ಗ್ರಂಥವನ್ನು ಹಿಂದೆ 1936ರಲ್ಲಿ ಧರ್ಮಾತ್ಮರಾದ ಪಣಪಿಲ ಅರಮನೆಯ ಶ್ರೀಮತಿ ದೇಜಮ್ಮರವರು ಜೀವದಯಾಷ್ಟಮಿಯ ಪುಣ್ಯಪರ್ವದಲ್ಲಿ ಮುದ್ರಣ ಮಾಡಿಸಿ ಶಾಸ್ತ್ರದಾನಕ್ಕಾಗಿ ಪ್ರಕಾಶಪಡಿಸಲು ಧನ ಸಹಾಯ ಮಾಡಿ ಮುಂದಾಗಿದ್ದರು. ನಂತರ 1950 ಮತ್ತು 1967 ನೇ ಇಸವಿಯಲ್ಲಿ ಪುನರ್ಮುದ್ರಣವಾಗಿದೆ.

ಈಗ ಈ ಗ್ರಂಥದ ಚತುರ್ಥ ಮುದ್ರಣಕ್ಕೆ (1000 ಪ್ರತಿಗಳು) ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿಗಳ ಮೊಮ್ಮಕ್ಕಳೂ ಮತ್ತು ಶ್ರೀ ಎಸ್. ನಾಗಕುಮಾರ್‌ರವರ ಸುಪುತ್ರರುಗಳೂ. ಧರ್ಮಾಭಿಮಾನಿಗಳೂ ಆದ ಶ್ರೀ ಎನ್. ಶಾಂತೀಶ್, ಎನ್. ಜಿನೇಶ್ ಮತ್ತು ಎನ್. ಕಿಶೋರ್‌ರವರುಗಳು ಮುಂದಾಗಿರುವುದು ಶ್ಲಾಘನೀಯಃ ಹಾಗೂ ಅನುಕರಣೀಯ. ಈ ಮುದ್ರಣದಲ್ಲಿ ಸಾಧ್ಯವಾದಷ್ಟೂ ತಪ್ಪು–ಒಪ್ಪುಗಳನ್ನು ಗಮನಿಸಿ ಸರಿಪಡಿಸಿ ಮೂಲ ಕೃತಿಗೆ ಯಾವ ರೀತಿಯ ಅಪಚಾರವೂ ಆಗದಂತೆ ವಿಷಯಾನುಕ್ರಮಣಿಕೆಯೊಂದನ್ನು ಸೇರಿಸಿ ದಿ॥ ಎ. ಶಾಂತಿರಾಜಶಾಸ್ತ್ರಿಗಳವರ ಮೂಲ ಮುನ್ನುಡಿಯೊಡನೆ ಪುನರ್ಮುದ್ರಿಸಲಾಗಿದೆ.

ಈ ಮುದ್ರಣಕ್ಕೆ ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರು 'ಆಶೀರ್ವಚನ' ದಯಪಾಲಿಸಿದ್ದಾರೆ. ಅವರಿಗೆ ಈ ಟ್ರಸ್ಟಿನ ಭಕ್ತಿಪೂರ್ವಕ ವಂದನೆಗಳು.

ಈ ಗ್ರಂಥದ ಪ್ರತಿಯು ನಮ್ಮಲ್ಲಿಲ್ಲದೆ ಪುನರ್ಮುದ್ರಣ ಮಾಡಿಸುವುದು ಹೇಗೆಂಬ ತೊಡಕಿನಲ್ಲಿದ್ದಾಗ ಇದರ ಮೂಲ ಪ್ರತಿಯನ್ನೊದಗಿಸಿಕೊಟ್ಟ ಶ್ರೀ ಅನಂತಕೀರ್ತಿ ಗ್ರಂಥಭಂಡಾರ, ನೆಲ್ಲಿಕಾರು ಇದರ ವ್ಯವಸ್ಥಾಪಕರವರಿಗೂ, ಈ ಗ್ರಂಥವನ್ನು ಅಚ್ಚುಕಟ್ಟಾಗಿ ತಪ್ಪುಗಳಿಗೆ ಅವಕಾಶವಾಗದಂತೆ ಮುದ್ರಿಸಿಕೊಟ್ಟ ಹಾಸನದ ಶ್ರೀ ಪದ್ಮಾಂಬ ಪ್ರೆಸ್‌ನ ಶ್ರೀ ರಾಜೇಂದ್ರಶೆಟ್ಟರವರಿಗೂ, ಈ ಗ್ರಂಥಕ್ಕೆ ಅಂದವಾದ ಮುಖಪುಟ ವಿನ್ಯಾಸವನ್ನು ಅತಿ ಶ್ರದ್ಧೆಯಿಂದ ರಚಿಸಿಕೊಟ್ಟ ಬೆಂಗಳೂರಿನ ಶ್ರೀ ಆರ್. ಎಸ್. ಪದ್ಮರಾಜ್‌ರವರಿಗೂ ಮತ್ತು ಮುಖಪುಟವನ್ನು ಅಂದವಾಗಿ ಮುದ್ರಿಸಿಕೊಟ್ಟ ಬಿ. ಬಿ. ಡಿ. ಪವರ್ ಪ್ರೆಸ್, ಬೆಂಗಳೂರು ಇವರೆಲ್ಲರನ್ನೂ ಟ್ರಸ್ಟ್ ಕೃತಜ್ಞತೆಯಿಂದ ಸ್ಮರಿಸುತ್ತದೆ.

ಬೆಂಗಳೂರು.

ದಿನಾಂಕ 31–5–88. **ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್.**

# ವಿಷಯಾನುಕ್ರಮ


| ವಿಷಯ | ಪುಟ |
|---|---|
| 1. ದ್ವಾದಶಾನುಪ್ರೇಕ್ಷೆ | 1 |
| 2. ಅನಿತ್ಯ-ಅಧ್ರುವಾನುಪ್ರೇಕ್ಷೆ | 5 |
| 3. ಅಶರಣಾನುಪ್ರೇಕ್ಷೆ | 7 |
| 4. ಸಂಸಾರಾನುಪ್ರೇಕ್ಷೆ | 9 |
| 5. ಏಕತ್ವಾನುಪ್ರೇಕ್ಷೆ | 11 |
| 6. ಅನ್ಯತ್ವಾನುಪ್ರೇಕ್ಷೆ | 13 |
| 7. ಅಶುಚಿತ್ವಾನುಪ್ರೇಕ್ಷೆ | 14 |
| 8. ಆಸ್ರವಾನುಪ್ರೇಕ್ಷೆ | 15 |
| 9. ಸಂವರಾನುಪ್ರೇಕ್ಷೆ | 16 |
| 10. ನಿರ್ಜರಾನುಪ್ರೇಕ್ಷೆ | 17 |
| 11. ಲೋಕಾನುಪ್ರೇಕ್ಷೆ | 19 |
| 12. ಬೋಧಿದುರ್ಲಭಾನುಪ್ರೇಕ್ಷೆ | 22 |
| 13. ಧರ್ಮಸ್ವಾಖ್ಯಾತತ್ವಾನುಪ್ರೇಕ್ಷೆ | 24 |
| 14. ಉಪಸಂಹಾರ | 27 |


# ಮುನ್ನುಡಿ

ಮುದ್ರಿತವಾಗುವ ಪ್ರತಿಯೊಂದು ಪುಸ್ತಕಕ್ಕೂ ಮುನ್ನುಡಿಯಿರಲೇಬೇಕಾದರೆ ಇದಕ್ಕೂ ಒಂದು ಮುನ್ನುಡಿಯಿರಲೆಂದು ಈ ಮುನ್ನುಡಿ. ಗ್ರಂಥಸ್ಥವಿಷಯಗಳನ್ನೂ ಅವುಗಳ ಪ್ರಯೋಜನವನ್ನೂ ಗ್ರಂಥವೇ ಪ್ರತಿಪಾದಿಸುವುದರಿಂದ ಮುನ್ನುಡಿಯಲ್ಲಿ ಅವುಗಳನ್ನು ಪ್ರತಿಪಾದಿಸುವ ಆವಶ್ಯಕತೆಯಿಲ್ಲವಾದರೂ ಗ್ರಂಥದ ಜನ್ಮಕ್ಕೆ ಕಾರಣವಾದ ಉದ್ದೇಶದ ಪ್ರತಿಪಾದನವು ಆವಶ್ಯಕವೆಂದು ತೋರಿದುದರಿಂದ ಅದಕ್ಕಾಗಿ ಈ ಮುನ್ನುಡಿಯ ಪ್ರಯತ್ನ. ಶಾಸ್ತ್ರದಾನಕ್ಕಾಗಿ ಈ ಪುಸ್ತಕವು ಜನ್ಮವೆತ್ತಿರುವುದರಿಂದ ಮುಖ್ಯವಾಗಿ ದಾನದ ವಿವರಣವೇ ಈ ಮುನ್ನುಡಿಯ ಕಳೇಬರವಾಗಿರುವುದು.

ಗೃಹಸ್ಥಾಶ್ರಮಿಗಳಿಗೆ ಶಾಸ್ತ್ರದಲ್ಲಿ ವಿಧಾಯಕವಾಗಿರುವ ನಾನಾ ಧಾರ್ಮಿಕ ಕಾರ್ಯಗಳಲ್ಲಿ ದಾನವೂ ಒಂದಾಗಿರುತ್ತದೆ. ಇದು ಗೋದಾನ ಭೂದಾನ ಮೊದಲಾದ ಅನೇಕ ಭೇದಗಳುಳ್ಳದಾಗಿರುವುದಾದರೂ ಆ ದಾನ ಭೇದಗಳಲ್ಲೆಲ್ಲ ೧. ಆಹಾರದಾನ, ೨. ಅಭಯದಾನ, ೩. ಭೈಷಜ್ಯ-ಔಷಧದಾನ, ಶಾಸ್ತ್ರ-ಜ್ಞಾನದಾನಗಳು ಪ್ರಧಾನಗಳೆಂದು ಜೈನಮಹರ್ಷಿಗಳ ಅಭಿಮತ. ಈ ನಾಲ್ಕು ದಾನಗಳ ಅರ್ಥಬೋಧೆಯು ಆಯಾ ಶಬ್ದಗಳಿಂದಲೇ ಆಗುವುದರಿಂದ 'ಇವುಗಳ ಅರ್ಥವಿವರಣೆಯ ಆವಶ್ಯಕತೆಯಿಲ್ಲ.

ಈ ದಾನಗಳನ್ನು ಏತಕ್ಕೋಸ್ಕರ ಯಾವ ಉದ್ದೇಶದಿಂದ ಮಾಡುವುದು? ಯಾವುದನ್ನು ದಾನಮಾಡುವುದು? ಎಂಬ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ವಿಚಾರಮಾಡುವುದಾದರೆ "ಅನುಗ್ರಹಾರ್ಥಂ ಸ್ವಸ್ಯಾತಿಸರ್ಗೋ ದಾನಂ" ಎಂದು ಮೋಕ್ಷಶಾಸ್ತ್ರ-ತತ್ತ್ವಾರ್ಥಸೂತ್ರದಲ್ಲಿ ಹೇಳಿರುವ ಉತ್ತರವು ದೊರೆಯುವುದು. ಅನುಗ್ರಹಕ್ಕೋಸ್ಕರ ಧನದ ತ್ಯಾಗವು ದಾನವಾಗಿರುತ್ತದೆಂದು ಈ ಸೂತ್ರದ ಅರ್ಥ. ಇಲ್ಲಿ ಅನುಗ್ರಹಶಬ್ದಕ್ಕೆ ಉಪಕಾರವೆಂದರ್ಥ. ಇದು

"ಸ್ವಪರೋಪಕಾರೋನುಗ್ರಹಃ" ಎಂದು ರಾಜವಾರ್ತಿಕದಲ್ಲಿ ಹೇಳಿರುವಂತೆ ಸ್ವೋಪಕಾರವೆಂದೂ ಪರೋಪಕಾರವೆಂದೂ ಎರಡು ಪ್ರಕಾರವಾಗಿರುತ್ತದೆ. ಪರರಿಗೆ ಮಾತ್ರವೇ ಅಲ್ಲದೆ ತನಗೂ ಉಪಕಾರವಾಗುವುದಕ್ಕೋಸ್ಕರ ದಾನವನ್ನು ಮಾಡುವುದಾಗಿದೆಯೆಂಬುದನ್ನು ನಾವು ಚೆನ್ನಾಗಿ ಲಕ್ಷ್ಯದಲ್ಲಿಡಬೇಕು. ದಾನವನ್ನು ತೆಗೆದುಕೊಳ್ಳುವವನಿಗೆ—ಪಾತ್ರನಿಗೆ ದಾನದಿಂದ ಉಪಕಾರವಾಗುವುದಲ್ಲದೆ ದಾನಿಗೆ - ದಾತೃವಿಗೆ ಉಪಕಾರವಾಗುವುದು ಹೇಗೆ ? ಎಂದು ಸಂದೇಹವುಂಟಾದರೆ ಇದಕ್ಕೆ ಅದೇ ಗ್ರಂಥದಲ್ಲಿರುವ ಸಮಾಧಾನವಿದು "ಸ್ವೋಪಕಾರ: ಪುಣ್ಯಸಂಚಯ; ಪರೋಪಕಾರ: ಸಮ್ಯಗ್ಜ್ಞಾನಾದಿವೃದ್ಧಿ:"— ಪುಣ್ಯಸಂಚಯವು ದಾನಿಗೆ—ತನಗೆ ಉಪಕಾರ; ಉತ್ತಮಜ್ಞಾನಾದಿಗಳ ವೃದ್ಧಿಯು ಪರನಿಗೆ—ಪಾತ್ರನಿಗೆ ಉಪಕಾರ ಸ್ವಶಬ್ದಕ್ಕೆ ಅನೇಕಾರ್ಥಗಳಿದ್ದರೂ ಇಲ್ಲಿ ಅದು ಧನದ ಪರ್ಯಾಯಶಬ್ದವಾಗಿರುತ್ತದೆ.

ಮೇಲೆ ಹೇಳಿದಂತೆ ಸ್ವಪರೋಪಕಾರಕ್ಕೋಸ್ಕರ ಧನವನ್ನು ಕೊಡುವುದು ದಾನವೆಂದಾದರೆ ಈ ಲಕ್ಷಣವು ಆಹಾರಾಭಯ ಭೈಷಜ್ಯ ಶಾಸ್ತ್ರದಾನಗಳಲ್ಲಿ ಅನ್ವಯಿಸದಿರುವುದರಿಂದ ಅವುಗಳು ದಾನಗಳಲ್ಲವೋ ಎಂದು ಕೆಲವರಿಗೆ ಶಂಕೆಯುಂಟಾಗಬಹುದು. ಅದಕ್ಕೆ ಸಮಾಧಾನವೇನೆಂದರೆ — ಸಾಕ್ಷಾತ್ ಸ್ವಪರೋಪಕಾರಕಗಳು ಆಹಾರಾದಿ ದಾನಗಳೇ ಆದರೂ ಅವು ಧನವ್ಯಯವಿಲ್ಲದೆ ಸಾಧ್ಯಗಳಲ್ಲವಾದುದರಿಂದ ಅವುಗಳಿಗೆ ಕಾರಣವಾದ ಧನಶಬ್ದವನ್ನೇ ಸೌಲಭ್ಯಕ್ಕೋಸ್ಕರ ಸೂತ್ರದಲ್ಲಿ ಪ್ರಯೋಗಿಸಿರುವುದಾಗಿದೆ. ದಾತೃವು ಪಾತ್ರನಿಗೆ ಧನವನ್ನು ದಾನಮಾಡಿದರೂ ಅವನು ಅದನ್ನು ವ್ಯಯಮಾಡಿಯೇ ಆಹಾರಾದಿ ಸಾಮಗ್ರಿಗಳನ್ನು ಒದಗಿಸಿಕೊಳ್ಳಬೇಕಾಗುವುದು. ಧನವೇ ಸಾಕ್ಷಾತ್ ಕ್ಷುಧಾದಿಬಾಧಾ ನಿವರ್ತಕವಲ್ಲ.

ಮೇಲೆ ಹೇಳಲ್ಪಟ್ಟ ದಾನಗಳಲ್ಲಿ ಪ್ರತಿಯೊಂದು ಸಾಮಾನ್ಯ ದಾನವೆಂದೂ ವಿಶೇಷದಾನವೆಂದೂ ಎರಡು ಪ್ರಕಾರವಾಗಿರುತ್ತದೆ. ವಿಶೇಷದಾನವು ವಿಧಿ ದ್ರವ್ಯ ದಾತೃ ಪಾತ್ರಗಳನ್ನವಲಂಬಿಸಿರುವುದು ಅಂದರೆ ದಾನದ ವಿಧಿವಿಶೇಷ ದಾನದ ವಸ್ತುವಿಶೇಷ ದಾತೃವಿಶೇಷ ಪಾತ್ರ ವಿಶೇಷಗಳಿಂದ ದಾನವು ವಿಶೇಷ



ದಾನವೆನ್ನಿಸುವುದು. ದಾತೃವಿನಲ್ಲಿ ಯಥೋಚಿತವಾಗಿರುವ ವಿನಯ ಸತ್ಕಾರಾದಿ ಕ್ರಿಯಾವಿಶೇಷಗಳ ರೀತಿಗೆ ವಿಧಿವಿಶೇಷವೆಂದೂ ದಾನಮಾಡಲ್ಪಡುವ ವಸ್ತುವು ಸಮ್ಯಗ್ಜ್ಞಾನಾದಿ ವೃದ್ಧಿಗೆ ಸಾಧನವಾಗಿದ್ದರೆ ಅದಕ್ಕೆ ದ್ರವ್ಯವಿಶೇಷವೆಂದೂ ವಿಷಾದ ಅಹಂಕಾರ ನಿದಾನಶಲ್ಯ ಪ್ರತ್ಯುಪಕಾರೇಚ್ಛೆ ಮಾಯೆ ಅಸೂಯೆ ಮೊದಲಾದ ಭಾವಗಳಿಲ್ಲದಿರುವ ದಾನಿಗೆ ದಾತೃವಿಶೇಷವೆಂದೂ ಮೋಕ್ಷಕ್ಕೆ ಕಾರಣಗಳಾದ ಸಮ್ಯಗ್ದರ್ಶನಜ್ಞಾನ ಚಾರಿತ್ರಾದಿ ಗುಣಗಳಿಂದ ಯುಕ್ತನಾಗಿರುವ ಪಾತ್ರನಿಗೆ ಅಂದರೆ ದಾನವನ್ನು ಸ್ವೀಕರಿಸುವವನಿಗೆ ಪಾತ್ರ ವಿಶೇಷವೆಂದೂ ಹೆಸರು. ಸಕಾಲದಲ್ಲಿ ಬೀಜವನ್ನು ಬಿತ್ತುವ ರೀತಿ, ಅಂಕುರ ಶಕ್ತಿಯುಳ್ಳ ಬೀಜ, ಅನುಭವಿಯಾದ ಕೃಷೀವಲ, ಸಾರವಾದ ಭೂಮಿ ಇವುಗಳ ವಿಶೇಷತೆಯಿಂದ ವಿಶೇಷಫಲವುಂಟಾಗುವಂತೆ ವಿಧಿದ್ರವ್ಯ ದಾತೃಪಾತ್ರ ವಿಶೇಷವಾದ ದಾನಫಲವುಂಟಾಗುವುದೆಂದು ಮುಖ್ಯ ತಾತ್ಪರ್ಯ.

ಕ್ಷಿತಿಗತಮಿವ ವಟಬೀಜಂ ಪಾತ್ರಗತಂ ದಾನಮಲ್ಪಮಪಿ ಕಾಲೇ ॥
ಫಲತಿ ಚ್ಛಾಯಾವಿಭವಂ ಬಹುಫಲಮಿಷ್ಟಂ ಶರೀರಭೃತಾಂ ॥

— ಶ್ರೀ ಸಮಂತಭದ್ರ.

ಸಕಾಲದಲ್ಲಿ ಒಳ್ಳೆಯ ಭೂಮಿಯನ್ನು ಹೊಂದಿದ ಸಣ್ಣದಾದ ಆಲದ ಬೀಜವು ಹೆಚ್ಚು ನೆರಳನ್ನು ಕೊಡುವಂತೆ ಸಕಾದಲ್ಲಿ ಸತ್ಪಾತ್ರಕ್ಕೆ ಕೊಟ್ಟ ಸ್ವಲ್ಪ ದಾನವೂ ಪ್ರಾಣಿಗಳಿಗೆ ಇಷ್ಟವಾದ ಬಹುಫಲವನ್ನು ಕೊಡುವುದು.

ಪಾತ್ರರು ಉತ್ತಮಪಾತ್ರ ಮಧ್ಯಮಪಾತ್ರ ಜಘನ್ಯಪಾತ್ರರೆಂದು ಮೂರು ಪ್ರಕಾರವಾಗಿರುತ್ತಾರೆ. ಪಂಚಮಹಾವ್ರತಗಳು ಪಂಚಸಮಿತಿಗಳು ಪಂಚೇಂದ್ರಿಯನಿಗ್ರಹ ಷಡಾವಶ್ಯಕಗಳು ಕೇಶೋತ್ಪಾಟನ ನಗ್ನತ್ವ ಅಸ್ನಾನ ಅದಂತಧಾವನ ಸ್ಥಿತಿಭೋಜನ ಏಕಭುಕ್ತ ಭೂಶಯನಗಳೆಂಬೀ ಇಪ್ಪತ್ತೆಂಟು ಮೂಲಗುಣಧಾರಿಗಳಾದ ಪರಮ ತಪಸ್ವಿಗಳು ಉತ್ತಮ ಪಾತ್ರರಾಗಿರುತ್ತಾರೆ.

ಅಣುವ್ರತಧಾರಿಗಳಾದ ಸಮ್ಯಗ್ದೃಷ್ಟಿ—ಶ್ರಾವಕರು ಮಧ್ಯಮಪಾತ್ರರಾಗಿರುತ್ತಾರೆ. ವ್ರತಾಚಾರವಿಲ್ಲದ ಸಮ್ಯಗ್ದೃಷ್ಟಿಗಳು ಜಘನ್ಯಪಾತ್ರರಾಗಿರುತ್ತಾರೆ.

ಮೇಲೆ ಹೇಳಲ್ಪಟ್ಟ ಆಹಾರಾದಿ ದಾನಗಳ ಕ್ರಮಾನುಸಾರವಾಗಿ ಉತ್ತರೋತ್ತರ ಫಲವಿಶೇಷವು ಸೂಚಿತವಾಗಿರುವುದೆಂದು ಸೂಕ್ಷ್ಮವಾಗಿ ವಿಚಾರ ಮಾಡಿದರೆ ಗೊತ್ತಾಗುವುದು. ಆಹಾರದಾನದಿಂದ ಪಾತ್ರನಿಗೆ ತಾತ್ಕಾಲಿಕವಾದ ತೃಪ್ತಿಯುಂಟಾಗುವುದು. ಅದಕ್ಕಿಂತ ದೀರ್ಘಕಾಲದ ಅಧಿಕತೃಪ್ತಿಯು ಅಭಯದಾನದಿಂದಲೂ ಅದಕ್ಕಿಂತ ಭೈಷಜ್ಯ ದಾನದಿಂದಲೂ ಉಂಟಾಗುವುದು ಸಚ್ಛಾಸ್ತ್ರದಾನಮೂಲಕವಾದ ಸಮ್ಯಗ್ಜ್ಞಾನದಾನದಿಂದಾದರೋ ಜನ್ಮಪರ್ಯಂತ ತೃಪ್ತಿಯುಂಟಾಗಬಹುದು. "ಜ್ಞಾನಂ ತ್ರೈಲೋಕ್ಯದುರ್ಲಭಂ" ಎಂದು ಪ್ರಶಂಸಿಸಲ್ಪಟ್ಟಿರುವ ಇಂತಹ ಜ್ಞಾನದ ಸಂಸ್ಕಾರವು ಭವಾಂತರಗಳಲ್ಲಿಯೂ ಉದ್ಬೋಧಿತವಾಗಬಹುದು. ಇದು ಪಾತ್ರನಿಗೆ ಆತ್ಮಕಲ್ಯಾಣಕಾರಿಯಾಗಿದೆ. ಈ ವೈಶಿಷ್ಟ್ಯವು ಇತರ ದಾನಗಳಿಗೆ ಸಲ್ಲದು.

ಸತ್ಪರಿಣಾಮದಿಂದ ಶಾಸ್ತ್ರದಾನವನ್ನು ಮಾಡುವ ದಾತೃವಿಗೆ ಸತ್ಕೀರ್ತಿಯೂ ಪುಣ್ಯಫಲವೂ ಪ್ರಾಪ್ತವಾಗುತ್ತವೆಂದು ಹೇಳುವ ಮಾತು ಸರ್ವಸಾಮಾನ್ಯವಾಗಿದೆ. ಜ್ಞಾನದಾನವನ್ನು ಮಾಡುವ ಪುಣ್ಯಾತ್ಮರಿಗೆ ಈ ಎರಡೇ ಫಲಗಳಲ್ಲದೆ "ಜ್ಞಾನವಾನ್ ಜ್ಞಾನದಾನೇನ" ಎಂದು ಹೇಳಲ್ಪಟ್ಟಿರುವಂತೆ ಭವಾಂತರದಲ್ಲಿ ಉತ್ತಮ ಜ್ಞಾನಪ್ರಾಪ್ತಿಯೂ ಆಗುವುದು. ಇದು ಪರಮಾಗಮದಲ್ಲಿ ವರ್ಣಿತವಾಗಿರುವ ವಸ್ತುಸ್ಥಿತಿ ಶುಷ್ಕಪ್ರಶಂಸೆಯಲ್ಲ.

ಈಗ್ಗೆ ಎಂಟು ವರುಷಗಳಿಂದ "ಶ್ರೀ ಅನಂತಕೀರ್ತಿಗ್ರಂಥಮಾಲೆ"ಯಲ್ಲಿ ಪ್ರತಿವರ್ಷ ಒಂದೊಂದು ಗ್ರಂಥಪುಷ್ಪವನ್ನು ಪೋಣಿಸಿ ವೇಣುಪುರ ಪುಣ್ಯಕ್ಷೇತ್ರದಲ್ಲಿ ಜೀವದಯಾಷ್ಟಮಿಾ ಪುಣ್ಯಪರ್ವದಲ್ಲಿ ಪಣಪಿಲ ಅರಮನೆಯ ಪುಣ್ಯದಂಪತಿಗಳು—ಶ್ರೀಮಾನ್ ಶ್ರೀವರ್ಮಶೆಟ್ಟರೂ ಶ್ರೀಮತೀ ದೇಜಮ್ಮನವರೂ ಶ್ರೇಷ್ಠವಾದ ಶಾಸ್ತ್ರ—ಜ್ಞಾನದಾನವನ್ನು ಮಾಡುತ್ತಿರುವುದು ಸ್ತುತ್ಯವೂ ಅನುಕರಣೀಯವೂ ಆಗಿದೆ.



ಈ ವರುಷ ಶಾಸ್ತ್ರದಾನಕ್ಕಾಗಿ ಆರಿಸಿಕೊಂಡಿರುವ ಈ ದ್ವಾದಶಾನುಪ್ರೇಕ್ಷೆಯು ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ವಿಸ್ತೃತವಾಗಿರುವುದಾದರೂ ಇದನ್ನು ಸಂಕ್ಷೇಪವಾಗಿ ಗದ್ಯರೂಪದಲ್ಲಿ ಬರೆದು ಈ ಪುಣ್ಯದಂಪತಿಗಳು ಮಾಡುತ್ತಿರುವ ಜ್ಞಾನಸಮಾರಾಧನೆಯಲ್ಲಿ ನಾನೂ ಭಾಗಿಯಾಗಲು ಅವಕಾಶವನ್ನಿತ್ತು ಸಧರ್ಮಿವಾತ್ಸಲ್ಯವನ್ನು ಬೀರಿದುದಕ್ಕಾಗಿ ಇವರಿಗೆ ನಾನು ಚಿರಕೃತಜ್ಞನು.

ಮಂಗಳೂರಿನಲ್ಲಿ ನ್ಯಾಯವಾದಿಗಳಾಗಿರುವ ಧರ್ಮಸ್ಥಳದ ಶ್ರೀಮಾನ್ ಪುಟ್ಟಸ್ವಾಮಿಯವರು ಬಿ.ಎ., ಬಿ.ಎಲ್. ಅವರು ಈ ಪುಸ್ತಕದಲ್ಲಿ ಅಚ್ಚಾಗಿರುವ ಪೂಜ್ಯ ಶ್ರೀ ೧೦೮ ಅನಂತಕೀರ್ತಿನಿರ್ಗ್ರಂಥ ಮಹಾಮುನಿಗಳ ಪಡಿಯಚ್ಚನ್ನು ಕಳುಹಿಸಿಕೊಟ್ಟಿರುವುದಕ್ಕಾಗಿ ಪ್ರಕಾಶಕರಂತೆ ನಾನೂ ಅವರಿಗೆ ಕೃತಜ್ಞನಾಗಿರುವೆನು.

ವೀರಶಕ ೨೪೬೩ನೆಯ ಧಾತೃಸಂವತ್ಸರದ ಆಶ್ವಯುಜ ಶುಕ್ಲಾಷ್ಟಮಿ
ತಾ॥ 23–10–1936

ಲೇಖಕ—
**ಎ. ಶಾಂತಿರಾಜಶಾಸ್ತ್ರಿ,**
ಮೈಸೂರು.

ಓಂ ನಮಸ್ಸಿದ್ಧೇಭ್ಯಃ

# ದ್ವಾದಶಾನುಪ್ರೇಕ್ಷೆ

ಅಂಧಕಾರದಿಂದ ವ್ಯಾಪ್ತವಾದ ಘೋರಾರಣ್ಯದಲ್ಲಿ ಹುಟ್ಟು ಕುರುಡನು ಹೆದ್ದಾರಿಯನ್ನು ಕಾಣದೆ ದೀರ್ಘಕಾಲ ಅಲೆದಲೆದು ದಣಿದು ದುಃಖಿಸುತ್ತಿರುವಾಗ ದೈವವಶಾತ್ ಅವನ ಕಣ್ಣಿಗೆ ಸಂಜೀವನಲತೆಯ ಸ್ಪರ್ಶವಾಗಿ ಕಣ್ಣು ಬಂದು ಹೆದ್ದಾರಿಯು ದೃಷ್ಟಿಗೋಚರವಾಗುವಂತೆ ಅನಾದಿಕಾಲದಿಂದ ಭವಗಹನದಲ್ಲಿ ಸಮ್ಯಗ್ಜ್ಞಾನವೆಂಬ ನೇತ್ರವಿಲ್ಲದೆ ಅಲೆಯುತ್ತಿರುವ ಸಂಸಾರಿಜೀವನಿಗೆ ಜಿನವಾಣಿಯೆಂಬ ಸಂಜೀವನ ಲತೆಯು ದೊರೆತು ಆ ಜ್ಞಾನನೇತ್ರವು ಪ್ರಾಪ್ತವಾಗಿ ಸನ್ಮಾರ್ಗವು ದೃಷ್ಟಿಗೋಚರವಾದರೆ ಆಗ ಅದನ್ನು ಸಾರ್ಥಕಪಡಿಸಿಕೊಳ್ಳುವವನೇ ವಿವೇಕಿ. ಹಾಗಲ್ಲದೆ ಆ ಹುಟ್ಟುಕುರುಡನು ಸಂಜೀವನಲತೆಯನ್ನು ಬಿಸುಟು ಮತ್ತೆ ಕುರುಡನಾಗಿ ಅರಣ್ಯದಲ್ಲಿ ಅಲೆಯುವಂತೆ ಸಂಸಾರಿ ಜೀವನು ಮನುಷ್ಯನಾಗಿ ಉತ್ತಮ ಮತದಲ್ಲಿ ಜನ್ಮವನ್ನೆತ್ತಿದರೂ ಅದನ್ನು ಸಂಪೂರ್ಣವಾಗಿ ಮರೆತು ಕೇವಲ ಭೋಗಲಂಪಟನಾದರೆ ಮತ್ತೆ ಭವಕಾನನ ದಲ್ಲಿ ಅಲೆಯುತ್ತಿರುವನೆಂಬುದು ಸಿದ್ಧಾಂತ.

ಬಹು ಸುಂದರನೂ ಶಕ್ತನೂ ಪ್ರತಿಭಾಶಾಲಿಯೂ ಸುಖಿಯೂ ರಾಜಲಕ್ಷಣಗಳುಳ್ಳವನೂ ರಾಜಭವನದಲ್ಲಿ ಹಂಸತೂಲತಲ್ಪದಲ್ಲಿರತಕ್ಕ ವನೂ ಆದ ಓರ್ವ ಸಾರ್ವಭೌಮನನ್ನು ಅವನ ಶತ್ರುವು ಮೂರ್ಛೆಗೊಳಿಸಿ ಬಂಧಿಸಿ ತೆಗೆದುಕೊಂಡು ಹೋಗಿ ಕೆಸರಿನಲ್ಲಿ ಹಾಕಿದ್ದು ಬಳಿಕ ಆ ಸಾರ್ವ ಭೌಮನು ಎಚ್ಚತ್ತು 'ನಾನು ಯಾರು ? ಯಾವ ವೈಭವವುಳ್ಳವನು ? ಎಲ್ಲಿರತಕ್ಕವನು ? ಏನನ್ನು ಹೊಂದತಕ್ಕವನು ? ಅದಕ್ಕೆ ಯಾವ ಸಾಧ ನಗಳನ್ನು ಒದಗಿಸಿಕೊಳ್ಳಬೇಕು ?" ಎಂದು ವಿಚಾರ ಮಾಡಿ ತನ್ನ ವಿಷ ಯಗಳನ್ನೆಲ್ಲ ಸ್ಮರಿಸಿಕೊಳ್ಳುವಂತೆ, ವಿವೇಕಿಯಾದ ಮಾನವನು "ಕೋಹಂ

ಕೀದೃಗ್ಗುಣಃ ಕ್ವತ್ಯಃ ಕಿಂ ಪ್ರಾಪ್ಯಃ ಕಿಂ ನಿಮಿತ್ತಕಃ. ನಾನು ಯಾರು ? ಎಂತಹ ಗುಣವುಳ್ಳವನು ? ಎಲ್ಲಿರತಕ್ಕವನು ? ಯಾವುದನ್ನು ಪಡೆಯತಕ್ಕವನು ? ಅದಕ್ಕೆ ಯಾವ ಸಾಧನವುಳ್ಳವನು ? ” ಎಂದು ಪ್ರತಿದಿವಸದಲ್ಲಿಯೂ ಪ್ರತಿಸಮಯದಲ್ಲಿಯೂ ವಿಚಾರಮಾಡಬೇಕು. ಆಗ ಈ ಪ್ರಶ್ನೆಗಳಿಗೆ “ನಾನು ನಿತ್ಯಸಚ್ಚಿದಾನಂದಸ್ವರೂಪಿಯಾದ ಆತ್ಮನು. ನಾನು ಅನಂತಜ್ಞಾನದರ್ಶನ ಸುಖಾದಿ ಗುಣಗಳುಳ್ಳವನು. ನಾನು ಕರ್ಮಶತ್ರುವಿನ ಬಂಧನವನ್ನು ದೂರಮಾಡಿ ಆತ್ಮೀಯ-ಸ್ವರಾಜ್ಯವನ್ನು-ಸ್ವಸ್ವರೂಪವನ್ನು ಹೊಂದತಕ್ಕವನು. ಅದಕ್ಕಾಗಿ ನಾನು ಸಮ್ಯಗ್ದರ್ಶನ ಜ್ಞಾನ ಚಾರಿತ್ರ ದ್ವಾದಶಾನುಪ್ರೇಕ್ಷಾದಿ ರೂಪವಾದ ಸಾಧನಗಳುಳ್ಳವನು” ಎಂಬೀ ಉತ್ತರಗಳು ದೊರೆಯುವುವು. ಆಗ ಉಂಟಾಗುವ ಆನಂದವೇ ಬೇರೆ.

ಒಂದು ಸಿಂಹದ ಮರಿಯು ಹುಟ್ಟಿದಾಗಲೇ ಕಾರಣಾಂತರದಿಂದ ನರಿಯ ಮರಿಗಳ ಜತೆಯಲ್ಲಿ ಸೇರಿ ಅವುಗಳ ಸಹವಾಸದಲ್ಲೇ ಇದ್ದು ಅವುಗಳ ವಾತಾವರಣದಲ್ಲೇ ಬೆಳೆದು ಸ್ವಶಕ್ತಿಯನ್ನೂ ಸ್ವಸ್ವರೂಪವನ್ನೂ ಮರೆತು ಪರತಂತ್ರವಾಗಿರುವಂತೆ ನಿತ್ಯಸಚ್ಚಿದಾನಂದಸ್ವರೂಪಿಯಾದ ಆತ್ಮನು ಅನಾದಿಕಾಲದಿಂದ ವಿವಿಧಕರ್ಮಗಳೊಡನೆ ಸೇರಿ ಸ್ವಶಕ್ತಿಯನ್ನೂ ಸ್ವಸ್ವರೂಪವನ್ನೂ ಮರೆತು ಪರತಂತ್ರನಾಗಿದ್ದಾನೆ. ಆ ಸಿಂಹದ ಮರಿಯು ಸ್ವಶಕ್ತಿಯನ್ನು ಅಂದರೆ ತನ್ನನ್ನು ತಾನು ತಿಳಿದ ಬಳಿಕ ಆ ನರಿಯ ಮರಿಗಳನ್ನು ಸಂಹರಿಸಿ ಸ್ವತಂತ್ರವಾಗಿ ಮೃಗರಾಜನಾಗಿ ಹೇಗೆ ಜೀವಿಸಬಲ್ಲುದೋ ಹಾಗೆ ಆತ್ಮನು ಸ್ವಶಕ್ತಿಯನ್ನು ತಿಳಿದ ಬಳಿಕ ಅನುಪ್ರೇಕ್ಷೆಗಳಿಂದಲೂ ತಪಸ್ಸಿನಿಂದಲೂ ಪರಮಶುಕ್ಲಧ್ಯಾನದಿಂದಲೂ ಕರ್ಮಗಳನ್ನು ನಾಶಮಾಡಿ ಪರಮಾತ್ಮನಾಗಿ ಎಂದೆಂದಿಗೂ ಜೀವಿಸಬಲ್ಲನು.

ಮೃಗಗಳಿಗೆಲ್ಲ ರಾಜನಾಗಿರುವ ಸಿಂಹವು ಪಂಜರದಲ್ಲಿ ಸಿಲುಕಿರುವಂತೆ ಅನಂತಶಕ್ತಿಸಂಪನ್ನನಾಗಿರುವ ಆತ್ಮನು ಕರ್ಮಪಂಜರದಲ್ಲಿ ಸಿಲುಕಿರುತ್ತಾನೆ. ಆ ಮೃಗರಾಜನು ‘ಆ ಪಂಜರವನ್ನು ಮುರಿದು ಬಿಸು



ಡುವ ಯುಕ್ತಿಯನ್ನೂ ತನ್ನ ಶಕ್ತಿಯನ್ನೂ ಪರಿಭಾವಿಸಿ ಉಪಯೋಗಿಸಿದರೆ ಸ್ವತಂತ್ರನಾಗಬಲ್ಲನು. ಮತ್ತಮಾತಂಗವನ್ನು ಮರ್ದಿಸಬಲ್ಲ ಮೃಗೇಂದ್ರನು ಒಣಮರದ ಪಂಜರವನ್ನು ಮುರಿದು ಬಿಸುಡಲಾರನೇ ? ಹಾಗೆ ಆತ್ಮನೂ ಕರ್ಮಪಂಜರವನ್ನು ಮುರಿದೆಸೆಯುವ ಯುಕ್ತಿಯನ್ನೂ ತನ್ನ ಶಕ್ತಿಯನ್ನೂ ಪರಿಭಾವಿಸಿ ಉಪಯೋಗಿಸಿದರೆ ಸ್ವತಂತ್ರನಾಗಿ-ಪರಮಾತ್ಮನಾಗಿ ರಾರಾಜಿಸಬಲ್ಲನು. ಆದರೆ ಶ್ರಮಸಾಧ್ಯ.

ಮರದೊಳಗಿರುವ ಬೆಂಕಿಯು ಘರ್ಷಣದಿಂದ ಅಭಿವ್ಯಕ್ತವಾಗಿ ಆ ಮರವನ್ನೇ ಸುಟ್ಟು ಬೇರೆಯಾಗುವುದು. ಎಳ್ಳಿನೊಳಗಿರುವ ಎಣ್ಣೆಯು ಗಾಣವಾಡಿಸುವುದರಿಂದ ಬೇರೆಯಾಗುವುದು. ಅನಾದಿಕಾಲದಿಂದ ಗಣಿಯಲ್ಲಿ ಕಲ್ಲಿನೊಡನೆ ಸೇರಿರುವ ಬಂಗಾರವು ಸಾಧನವಿಶೇಷಗಳಿಂದ ಬೇರೆಯಾಗಿ ಅಪರಂಜಿ-ಚಿನ್ನವಾಗುವುದು. ಹೀಗೆ ಸಂಯುಕ್ತವಾಗಿರುವ ಪದಾರ್ಥಗಳು ಸಾಧನವಿಶೇಷಗಳಿಂದ ಬೇರೆ ಬೇರೆಯಾಗುವಂತೆ ಅನಾದಿಕಾಲದಿಂದ ಜಡ-ಕರ್ಮದೊಡನೆ ಸಂಯುಕ್ತನಾಗಿರುವ ಆತ್ಮನು ಸಾಧನವಿಶೇಷಗಳಿಂದ ಬೇರೆಯಾಗಿ ಶುದ್ಧ-ಪರಮಾತ್ಮನಾಗಬಲ್ಲನು. ಅಂತಹ ಸಾಧನವಿಶೇಷಗಳಲ್ಲಿ ದ್ವಾದಶಾನುಪ್ರೇಕ್ಷೆಯೂ ಒಂದು.

ಜೈನಸಿದ್ಧಾಂತದಲ್ಲಿ ಜೀವ ಅಜೀವ ಆಸ್ರವ ಬಂಧ ಸಂವರ ನಿರ್ಜರಾ ಮೋಕ್ಷಗಳೆಂದು ಏಳು ತತ್ತ್ವಗಳು ಹೇಳಲ್ಪಟ್ಟಿವೆ. ಇವುಗಳಲ್ಲಿ ಮೊದಲಿನ ಎರಡು-ಜೀವ ಅಜೀವತತ್ತ್ವಗಳ ಸಂಬಂಧದಿಂದಲೇ ಮುಂದಿನ ಐದು ತತ್ತ್ವಗಳುಂಟಾಗುವುವು. ಜೀವಾತ್ಮನ ಮನೋವಾಕ್ಕಾಯ ವ್ಯಾಪಾರಗಳಿಗೆ ಯೋಗವೆಂದು ಹೆಸರು. ಯಥೋಚಿತವಾಗಿ ಈ ಯೋಗವನ್ನು ನಿಮಿತ್ತವನ್ನಾಗಿ ಮಾಡಿಕೊಂಡು ಅಜೀವ-ಜಡ-ಕರ್ಮ ಪರಮಾಣುಸಮೂಹಗಳು ಜೀವಾತ್ಮಪ್ರದೇಶಕ್ಕೆ ಬಂದು ಸೇರುವುದಕ್ಕೆ ಆಸ್ರವತತ್ತ್ವವೆಂದೂ ಆ ಕರ್ಮಪರಮಾಣುಸಮೂಹಗಳು ಆತ್ಮಪ್ರದೇಶಗಳಲ್ಲಿ ಕ್ಷೀರನೀರದಂತೆ ಸಂಬಂಧವಾಗುವುದಕ್ಕೆ ಬಂಧತತ್ತ್ವವೆಂದೂ ಆ ಕರ್ಮ ಪರಮಾಣುಸಮೂಹಗಳು ಆತ್ಮಪ್ರದೇಶಕ್ಕೆ ಬಾರದಂತೆ ಮಾಡುವ-ತಡೆಗಟ್ಟುವ